# ಮಾತೃಸ್ಮೃತಿ

ಮೂಲ ಬಂಗಾಳಿ : **ಲಾವಣ್ಯಕುಮಾರ್ ಚಕ್ರವರ್ತಿ** ಅನುವಾದ : **ಸ್ವಾಮಿ ಜ್ಞಾನಯೋಗಾನಂದ**

## ಭಾಗ ೩

**ಬೆ**ಳಿಗ್ಗೆ ಬಹಳ ಬೇಗನೆ ನನ್ನ ಸ್ನೇಹಿತನೊಂದಿಗೆ ಗಂಗಾಸ್ನಾನ ಮಾಡಲು ಹೋದೆ. ಶ್ರೀಮಾತೆಯವರ ಶಿಷ್ಯರೂ, ಅವರ ಸೇವಕರೂ ಆಗಿದ್ದ ಸ್ವಾಮಿ ವಿಶ್ವೇಶ್ವರಾನಂದಜಿ (ಕಪಿಲ್ ಮಹಾರಾಜ್) ಕೂಡ ಅಲ್ಲಿದ್ದರು. ನನ್ನ ಕೆಲವು ಪೂಜೆಯ ಸಾಮಗ್ರಿಗಳು, ತೆಳ್ಳನೆಯ ಅಂಚಿನ ವಸ್ತ್ರ (ಸೀರೆ– ಶ್ರೀಮಾತೆಯವರಿಗಾಗಿ) ಇತ್ಯಾದಿಗಳನ್ನು ಕೈಯಲ್ಲಿ ಹಿಡಿದುಕೊಂಡು ಅವರು ನದೀತೀರದಲ್ಲೇ ನಿಂತಿದ್ದರು; ನಮ್ಮ ಬಟ್ಟೆಬರೆ ಇತ್ಯಾದಿಗಳೂ ಅವರ ಬಳಿಯೇ ಇದ್ದವು. ದೀಕ್ಷೆಯ ಬಗ್ಗೆ ಶರತ್ ಮಹಾರಾಜರಿಗೆ ಹೇಳಿರಲಿಲ್ಲ. ಅದರಿಂದಾಗಿ ನನ್ನ ಮನಸ್ಸಿನಲ್ಲಿ ದುಗುಡವುಂಟಾಗಿತ್ತು. ಸ್ನಾನ ಮುಗಿದ ನಂತರ ಮೂವರೂ ಶ್ರೀಮಾತೆಯವರ ಬಳಿಗೆ ಹೋದೆವು. ಶರತ್ ಮಹಾರಾಜರ ಮುಂದೆಯೇ ಅವರನ್ನು ಹಾದುಕೊಂಡು ಮೇಲಂತಸ್ತಿಗೆ ಹೋಗಬೇಕಿತ್ತು. ನನಗೆ ಏನೋ ಒಂದು ಬಗೆಯ ಸಂಕೋಚ, ಭಯ ಉಂಟಾಯಿತು. ಶರತ್ ಮಹಾರಾಜರು ಇದನ್ನು ಮನಸ್ಸಿಗೆ ತಂದುಕೊಳ್ಳುವರೇ– ಎಂದು ನನಗೆ ಅನ್ನಿಸತೊಡಗಿತು. ನನ್ನೊಂದಿಗಿದ್ದ ಇಬ್ಬರಿಗೂ ನಾನು ನನ್ನ ಮನಸ್ಸಿನ ಸಂಕೋಚವನ್ನು ತಿಳಿಸಿದೆ. ಏನು ಮಾಡಲಿ? ಕಪಿಲ್ ಮಹಾರಾಜರು ಹೇಳಿದರು: ''ತಿಳಿಸುವ ಅಗತ್ಯವಿದ್ದಿದ್ದರೆ, ಹಾಗೆ ಮಾಡಲು ಶ್ರೀಮಾತೆಯವರೇ ಹೇಳುತ್ತಿದ್ದರು. ಅಷ್ಟೊಂದು ಚಿಂತಿಸುವ ಅಗತ್ಯವೇನಿದೆ?'' ಆದರೂ ಚಿಂತೆಯಂತೂ ಇದ್ದೇ ಇತ್ತು. ಮನಸ್ಸಿನ ಮೂಲೆಯಲ್ಲಿ ಏನೋ ಕತ್ತಲು. ನನಗೆ ನೆನಪಾಯಿತು, 'ಚಂದ್ರ ಯಾರಿಗೆ ದಯೆಯ ತೋರ್ವನೊ, ಕತ್ತಲಾತನ ಏನಗೈವುದು?' – ಹಾಗಿದ್ದೂ, ದೇವಾಲಯದ ಬಳಿಗೆ ಹೋದ ಬಳಿಕ ನಾನು ನಿಂತೇ ಇದ್ದೆ. ಕಪಿಲ್ ಮಹಾರಾಜ್ ನಗುತ್ತ ಹೇಳಿದರು, ''ಬನ್ನಿ, ಶರತ್ ಮಹಾರಾಜರ ಮುಂದಿನಿಂದ ಹೋಗಬೇಕಾಗಿಲ್ಲ. ಈ ಭಾಗದ ಮೆಟ್ಟಿಲ ಮೂಲಕ ಹತ್ತಿಹೋಗಬಹುದು.'' ಜೀವ ಉಳಿದಂತಾಗಿ ನಿಟ್ಟುಸಿರುಬಿಟ್ಟೆ. ಅನಂತರ ನನಗೆ ಗೊತ್ತಾಯಿತು, ಶ್ರೀಮಾತೆಯವರು ಕಾಯುತ್ತಿದ್ದರು ಎಂಬುದಾಗಿ. ಶ್ರೀಮಾತೆಯವರ ಕೋಣೆ ಅಥವಾ ದೇವರ ಕೋಣೆಯನ್ನು ಪ್ರವೇಶಿಸಿದೆ. ಶ್ರೀಮಾತೆಯವರು ಆಸನದಲ್ಲಿ ಕುಳಿತಿದ್ದರು. ಪಕ್ಕದಲ್ಲಿದ್ದ ಒಂದು ಆಸನದಲ್ಲಿ ಕುಳಿತುಕೊಳ್ಳಲು ನನಗೆ ಹೇಳಿದರು. ದೀಕ್ಷೆಗೆ ಸಂಬಂಧಪಟ್ಟ ಕ್ರಿಯೆಗಳು ಆರಂಭಗೊಂಡವು.

ಶ್ರೀರಾಮಕೃಷ್ಣರು ನನಗೆ ನೀಡಿದ ಅಗ್ನಿಮಯ ನಾಮವನ್ನು ನಾನು ಯಾರಿಗೂ ಹೇಳಿರಲಿಲ್ಲ ; ಅದನ್ನು ಶ್ರೀಮಾತೆಯವರು



ಬಾಯಿಯಿಂದ ಉಚ್ಚರಿಸಿದ ಕೂಡಲೇ ನನಗೆ ಒಂದು ಅಪೂರ್ವ ಭಾವೋದ್ವೇಗವುಂಟಾಯಿತು. ನಾನು ಸಹಜಾವಸ್ಥೆಗೆ ಬಂದಾಗ ಶ್ರೀರಾಮಕೃಷ್ಣರ ಪೂಜೆಯ ಆಸನದಲ್ಲಿ ಇಟ್ಟಿದ್ದ ಅವರ ಭಾವಚಿತ್ರ ಹಾಗೂ ಗೋಡೆಯಲ್ಲಿ ತೂಗುಹಾಕಿದ್ದ ತಮ್ಮದೇ ಭಾವಚಿತ್ರ –ಇವನ್ನು ತೋರಿಸುತ್ತ ಶ್ರೀಮಾತೆ, ''ಇವರನ್ನು ಸ್ಮರಿಸಿಕೊಂಡರೂ ಸಾಕಾಗುವುದು'' ಎಂದರು. ಹೀಗೆ ನಮಗಿಬ್ಬರಿಗೂ ತೋರಿಸಿ ಹೇಳಿದರು. ಅವರ ಆಶೀರ್ವಾದ ಪಡೆದು, ಪ್ರಣಾಮ ಮಾಡಿದ ಬಳಿಕ ನಾನು ಹೊರಗೆ ಬಂದೆ. ಇದ್ದಕ್ಕಿದ್ದಂತೆ ನನಗೆ ನೆನಪಾಯಿತು, ಶ್ರೀಮಾತೆಯವರು ನನ್ನ ತಲೆಯ ಮೇಲೆ ಕೈಯಿಟ್ಟು ಆಶೀರ್ವದಿಸಲಿಲ್ಲವಲ್ಲ – ಎಂದು. ಅದೇ ಸಮಯಕ್ಕೆ ಸರಿಯಾಗಿ ಒಳಗಿನಿಂದ ಮತ್ತೆ ಕರೆ ಬಂತು. ಬ್ರಹ್ಮಚಾರಿ ಮಹಾರಾಜ್ ಹೇಳಿದರು, ''ಶ್ರೀಮಾತೆ ನಿಮ್ಮನ್ನು ಕರೆಯುತ್ತಿದ್ದಾರೆ.'' ನಾನು ಒಳಗೆ ಹೋದೆ. ಶ್ರೀಮಾತೆಯವರು ಅದೇ ದೀಕ್ಷೆಯ

ಆಸನದಲ್ಲಿ ಕುಳಿತುಕೊಳ್ಳಲು ಹೇಳಿದರು. ಬಳಿಕ ಅಂತರ್ಯಾಮಿನಿ ಶ್ರೀಮಾತೆಯವರ ದಿವ್ಯಹಸ್ತದ ಸ್ಪರ್ಶ ನನ್ನ ತಲೆಯ ಮೇಲೆ ಉಂಟಾಯಿತು. ಶ್ರೀಮಾತೆಯವರು, ''ಈ ಬಾರಿ ಎಲ್ಲ ಮುಗಿಯಿತಲ್ಲ?'' ಎಂದರು. ನಾನು ವಿಹ್ವಲಗೊಂಡವನಂತೆ ಅವರ ಪಾದಪದ್ಮಗಳಲ್ಲಿ ತಲೆಯನ್ನಿಟ್ಟು ನಮಸ್ಕರಿಸಿದೆ; ಕಂಪಿಸುತ್ತ ಹೊರಗೆ ಬಂದೆ.

ಶ್ರೀರಾಮಕೃಷ್ಣರು ಹಾಗೂ ಶ್ರೀಮಾತೆಯವರು ಅಭಿನ್ನರು ಎಂಬುದಾಗಿ ಶ್ರೀ 'ಮ' ಅವರು ನನಗೆ ಮೊದಲ ಬಾರಿಗೆ ಬರೆದ ಪತ್ರದಲ್ಲಿ ಬರೆದಿದ್ದರು. ಎರಡೂ ಒಂದೇ ಸತ್ಯ. ಹೊರಗಿನಿಂದ ಮಾತ್ರ ಭಿನ್ನತೆ. ನರ–ನಾರಿ ದೇಹವನ್ನು ಧರಿಸಿದ್ದಾರೆ.

ನನ್ನ ಅಭೀಷ್ಟವನ್ನು ಈಡೇರಿಸಿಕೊಂಡು, ನನ್ನ ಜನ್ಮ ಹಾಗೂ ಜೀವನದ ಸಾರ್ಥಕತೆಯನ್ನು ತಲೆಯ ಮೇಲೆ ಧರಿಸಿಕೊಂಡೆ. ಏನಾದರೂ ಆಗಲಿ ಎಂದು ಕೊಂಡು ಈಗ ಶರತ್ ಮಹಾರಾಜರ ಬಳಿಗೆ ಪ್ರಣಾಮ ಮಾಡಲು ಹೋದೆ. ನನ್ನ ಇಚ್ಛೆ ಪೂರೈಸಿದ ವಿಚಾರವನ್ನು ಅವರಿಗೆ ತಿಳಿಸಿದೆ. ಕೋಪವೆಲ್ಲಿಗೆ ಹೋಯಿತು? ಆ ಕೂಡಲೇ ಮಹಾರಾಜ್ ಪ್ರೀತಿಯಿಂದ ನನ್ನನ್ನು ಆಲಿಂಗಿಸಿ, ''ಧನ್ಯ!'' ಎಂದರು. ನನ್ನ ಕಣ್ಣುಗಳಲ್ಲಿ ನೀರು ತುಂಬಿ ಬಂದವು. ನಾನು ಮನಸ್ಸಿನಲ್ಲೇ ಹೇಳಿಕೊಂಡೆ – 'ನೀವೇ ವರೇಣ್ಯರು, ನೀವೇ ಮಹಾನ್ ವ್ಯಕ್ತಿ – ನೀವೇ ವಿರಾಟ್. ನಿಮಗೆ ನನ್ನ ಪ್ರಣಾಮಗಳನ್ನು ಸಲ್ಲಿಸುವೆ.'

ಇನ್ನೊಮ್ಮೆ, ಮಹಾಷ್ಟಮಿಯ ದಿನ. ಶ್ರೀದುರ್ಗಾಮಾತೆಯ ಪ್ರತಿಮೆಗೆ ಪೂಜೆಯಾದ ಬಳಿಕ, ಅನೇಕ ಮಂದಿ ಭಕ್ತರು ಶ್ರೀಮಾತೆಯವರಿಗೆ ಪ್ರಣಾಮ ಸಲ್ಲಿಸುವುದಕ್ಕಾಗಿ ನೀಲಾಂಬರ ಬಾಬುವಿನ ಭವನದತ್ತ ಹೋಗುತ್ತಿದ್ದರು. ಶ್ರೀಮಾತೆಯವರು ಒಂದು ಸಣ್ಣ ಮರದ ಕುರ್ಚಿಯಲ್ಲಿ ಕುಳಿತಿದ್ದರು. ಪಕ್ಕದಲ್ಲಿ ಪೂಜ್ಯ ಗೋಲಾಪ್ ಮಾ; ಅವರ ಕೈಯಲ್ಲಿ ಬೀಸಣಿಗೆಯಿತ್ತು, ಅವರು ಶ್ರೀಮಾತೆಯವರಿಗೆ ಗಾಳಿ ಬೀಸುತ್ತಿದ್ದರು. ಒಂದು ಬಾಗಿಲ ಮೂಲಕ ಭಕ್ತರು ಪ್ರವೇಶಿಸುತ್ತಿದ್ದರು; ಶ್ರೀಮಾತೆಯವರಿಗೆ ಪ್ರಣಾಮ ಮಾಡಿದ ನಂತರ ಇನ್ನೊಂದು ಬಾಗಿಲಿನಿಂದ ಹೊರಗೆ ಹೋಗುತ್ತಿದ್ದರು. ದೊಡ್ಡದೊಂದು ಲೈನ್ ಇತ್ತು. ಒಬ್ಬರ ಹಿಂದೆ ಇನ್ನೊಬ್ಬರು ನಿಂತಿದ್ದರು. ಪ್ರವೇಶದ್ವಾರದ ಪಕ್ಕದಲ್ಲೇ ಪೂಜ್ಯ ಶರತ್ ಮಹಾರಾಜರು ಕುಳಿತಿದ್ದರು. ನಾನು ಶ್ರೀಮಾತೆಯವರ ಹತ್ತಿರಕ್ಕೆ ಬಂದಾಗ, ನನ್ನ ಮುಂದಿದ್ದ ಭಕ್ತನು ಕೈ ಮುಗಿದು ನಮಸ್ಕರಿಸುತ್ತಿದ್ದ. ಪ್ರಣಾಮ ಮಾಡುತ್ತ ಮಂತ್ರೋಚ್ಚಾರಣೆ ಮಾಡಲು ಆರಂಭಿಸಿದ. ಏಳುತ್ತಲೇ ಇಲ್ಲ.

ಗೋಲಾಪ್ ಮಾ ಹೇಳಿದರು: ''ಅಬ್ಬಬ್ಬಾ, ಎಂಥ ಭಕ್ತಿ ನೋಡು! ಇಷ್ಟೊಂದು ಜನಜಂಗುಳಿ ಇರುವಾಗ, ಇಷ್ಟೊಂದು ಸೆಖೆ ಕೂಡ, ಶ್ರೀಮಾತೆಯವರಿಗೆ ಕಷ್ಟವಾಗುವುದಿಲ್ಲವೆ? ಅಷ್ಟೊಂದು ದೀರ್ಘವಾಗಿ ಪ್ರಣಾಮ ಏಕೆ ಮಾಡುವೆ?'' ಈ ವಿಷಯ ಶರತ್ ಮಹಾರಾಜರ ಕಿವಿಗೆ ಬೀಳಲು ಹೆಚ್ಚು ತಡವಾಗಲಿಲ್ಲ, ಅವರೆಂದರು: ''ಗೋಲಾಪ್–ಮಾ, ಅವನ ಎಲ್ಲ ಆಸೆ, ಆಕಾಂಕ್ಷೆಗಳನ್ನೂ ನಿವೇದನೆ ಮಾಡಿಕೊಳ್ಳಬೇಕಲ್ಲವೆ? 'ರೂಪಂ ದೇಹಿ, ಜಯಂ ದೇಹಿ, ಭಾರ್ಯಾಂ ದೇಹಿ, ಮನೋರಮಾಂ ದೇಹಿ' – ಎಷ್ಟೊಂದು! ಯಾಕೆ ಜೋರು ಮಾಡುತ್ತೀರಿ?''

ಅಲ್ಲಿ ಸೇರಿದ ಭಕ್ತರೆಲ್ಲರೂ ಜೋರಾಗಿ ನಗತೊಡಗಿದರು. ಶ್ರೀಮಾತೆಯವರೂ ತುಸು ನಕ್ಕರು. ಆ ಭಕ್ತ ಇನ್ನೇನೂ ಉಚ್ಚರಿಸದೆ, ಒಂದೇ ಸವನೆ ಓಡಿಹೋದ. ಈ ಸಂದರ್ಭದಲ್ಲಿ ಹಲವು ಸಂಗತಿಗಳ ನಡುವೆ ಇನ್ನೊಂದು ವಿಷಯವೂ ನೆನಪಿಗೆ ಬಂತು. ಶ್ರೀಮಾತೆಯವರ ದೇಹತ್ಯಾಗವಾದ ಮೇಲೆ ನಡೆದ ಘಟನೆ.

'ಉದ್ಬೋಧನ' ದಲ್ಲಿ ಶರತ್ ಮಹಾರಾಜರ ಕೋಣೆಯಲ್ಲಿ ಕೆಲವು ಮಂದಿ ಭಕ್ತರೊಂದಿಗೆ ನಾನು ಕುಳಿತಿದ್ದೆ. ಒಬ್ಬರು ವೃದ್ಧರು ಏನೇನೋ ಮಾತುಕತೆಗಳ ನಂತರ ಮಹಾರಾಜರನ್ನು ಕೇಳಿದರು: ''ಮಹಾರಾಜ್, ಠಾಕೂರರ ದೇವಾಲಯ ನಿರ್ಮಾಣವಾಗುವುದಕ್ಕೆ ಮೊದಲೇ ಶ್ರೀಮಾತೆಯವರ ಮಂದಿರವೇಕೆ ನಿರ್ಮಾಣವಾಯಿತು? ಇದು ಸರಿಯೆ?'' ಆಗ ಜಯರಾಮಬಾಟಿಯಲ್ಲಿ 'ಮಾತೃಮಂದಿರ'ದ ನಿರ್ಮಾಣಕಾರ್ಯ ನಡೆಯುತ್ತಿತ್ತು.

ಶರತ್ ಮಹಾರಾಜರು ಅವರತ್ತ ಒಂದುಕ್ಷಣ ದಿಟ್ಟಿಸಿ ನೋಡಿ ಹೇಳಿದರು: ''ಈ ಮಾತನ್ನು ಠಾಕೂರ್ ಅಥವಾ ಶ್ರೀಮಾತೆಯವರ ಬಳಿಯೇ ಕೇಳಿದರೆ ಉತ್ತರ ಸಿಕ್ಕೀತು. ಈ ಕೆಲಸ ಆರಂಭಿಸುವ ಮೊದಲು ನೀವು ಸಿಕ್ಕಿದ್ದಿದ್ದರೆ, ಎಲ್ಲ ಅದಲುಬದಲು ಆಗಿಬಿಡುತ್ತಿತ್ತು – ಅಂತ ನಾನು ಹೇಳುತ್ತೇನೆ.''

ನಮಗೆ ನಗು ತಡೆಯಲಾಗಲಿಲ್ಲ. ಆ ವೃದ್ಧರ ಮುಖ ಬಣ್ಣಗೆಟ್ಟಿತು. ಅವರೆಂದರು, ''ಇಲ್ಲ ನಾನು ಹೀಗೇ ಸುಮ್ಮನೆ ಕೇಳಿದೆ, ಅಷ್ಟೇ.''

ಇನ್ನೊಂದು ವಿಷಯ. ಅದೇ ದುರ್ಗಾಪೂಜೆಯ ಸಮಯ. ಶ್ರೀಮಾತೆಯವರು ದುರ್ಗಾಪೂಜೆಯ ಸಂದರ್ಭದಲ್ಲಿ ಬೇಲೂರು ಮಠಕ್ಕೆ ಬಂದು ತಲುಪಿದ್ದರು. ಬೇಲೂರು ಮಠದ ಉತ್ತರ ಭಾಗದಲ್ಲಿದ್ದ ಉದ್ಯಾನಮನೆ ('ಲೆಗೆಟ್ ಹೌಸ್' ನಲ್ಲಿ)ಯಲ್ಲಿ ಅವರು ತಂಗಿದ್ದರು. ನವಮಿಯ ದಿನವಿರಬೇಕು, ಮಧ್ಯಾಹ್ನದ ನಂತರ ಅಲ್ಲಿಗೆ ಬಂದ ಗೋಲಾಪ್–ಮಾ ಹೇಳಿದರು: ''ಶರತ್, ಶ್ರೀಮಾತೆಯವರು ನಿನ್ನ ಸೇವೆಯಿಂದ ತುಂಬ ಸಂತಸಗೊಂಡಿದ್ದಾರೆ.'' ಆಗ ಬಾಬುರಾಮ್ ಮಹಾರಾಜ್ (ಸ್ವಾಮಿ ಪ್ರೇಮಾನಂದರು) ಪಕ್ಕದಲ್ಲಿದ್ದರು. ಅನೇಕ ಮಂದಿ ಸಾಧುಗಳು ಹಾಗೂ ಭಕ್ತರು ಕೂಡ ಅಲ್ಲಿದ್ದರು. ಶರತ್ ಮಹಾರಾಜ್ ಆನಂದದಿಂದ ಕೂಡಿದ ಗಂಭೀರ ಧ್ವನಿಯಿಂದ ಹೇಳಿದರು: ''ನಿಜವಾಗಿಯೂ?'' ಹೀಗೆಂದ ಅವರು, ಪಕ್ಕದಲ್ಲಿದ್ದ ಬಾಬುರಾಮ್ ಮಹಾರಾಜರತ್ತ ನೋಡಿ ಭಾವೋದ್ವೇಗದಿಂದ, ''ಬಾಬುರಾಮ್–ದಾ, ಕೇಳಿದೆಯಾ?'' ಎಂದರು. ಆಗ ಬಾಬುರಾಮ್ ಮಹಾರಾಜರ ಮುಖದಲ್ಲಿ ಹಾಗೂ ಕಣ್ಣುಗಳಲ್ಲಿ ಸಾರ್ಥಕ ಭಾವದಿಂದ ಕೂಡಿದ

ಆನಂದ ಸ್ಪಷ್ಟವಾಗಿ ವ್ಯಕ್ತವಾಗುತ್ತಿತ್ತು. ಇಬ್ಬರೂ ಆನಂದದಿಂದ ತಬ್ಬಿಕೊಂಡರು. ಶರತ್ ಮಹಾರಾಜರ ಭಾವೋದ್ವೇಗದಿಂದ ಕೂಡಿದ ಆ ಕಂಪಿಸುವ ಧ್ವನಿ ಇಂದಿಗೂ ನನ್ನ ಕಿವಿಯಲ್ಲಿ ಮೊಳಗುತ್ತಿದೆ. 'ಉದ್ಬೋಧನ' ಪತ್ರಿಕೆಯಲ್ಲಿ ಪ್ರಕಟವಾದ ನನ್ನ 'ಪ್ರೇಮಾನಂದ-ಸ್ಮೃತಿ' ಎಂಬ ಲೇಖನದಿಂದ ಈ ಘಟನೆಯನ್ನು ಸ್ವಾಮಿ ಗಂಭೀರಾನಂದಜಿಯವರು ತಮ್ಮ ಶ್ರೀಮಾತೆಯವರ ಜೀವನ ಚರಿತ್ರೆಯಲ್ಲಿ 'ಬೇಲೂರು ಮಠ ಹಾಗೂ ಕಾಶಿ' ಎಂಬ ಅಧ್ಯಾಯದಲ್ಲಿ ಉಲ್ಲೇಖಿಸಿದ್ದಾರೆ. *('ಉದ್ಬೋಧನ'-೨೭ನೇ ಸಂಪುಟ, ೧೧ನೇ ಸಂಚಿಕೆ; ಬಂಗಾಳಿ ವರ್ಷ ೧೩೩೨ರ ಅಗ್ರಹಾಯಣ, ಪು ೬೬೩)*

ದುರ್ಗಾಪೂಜೆಯ ಷಷ್ಠಿಯ ದಿನದಂದು ಶ್ರೀಮಾತೆಯವರ ಗಾಡಿ ಬೇಲೂರು ಮಠದ ಪ್ರಧಾನ ದ್ವಾರದ ಬಳಿ ಬಂದು ನಿಂತಿತು. ಕುದುರೆಗಳನ್ನು ಬಿಡಿಸಿ, ಸ್ವಾಮಿ ಪ್ರೇಮಾನಂದರೇ ಮೊದಲಾದ ಶ್ರೀರಾಮಕೃಷ್ಣರ ಲೀಲಾಸಹಚರರು ಗಾಡಿಯನ್ನು ತಳ್ಳಿಕೊಂಡು ಬೇಲೂರು ಮಠದ ಆವರಣದತ್ತ ಕರೆತರುತ್ತಿದ್ದರು. ಅಲ್ಲಿ ಸೇರಿದ್ದ ಭಕ್ತರ ಸಂದಣಿ ''ಶ್ರೀ ಗುರುಮಹಾರಾಜ್ ಜೀ ಕೀ ಜೈ'', ''ಶ್ರೀ ಮಹಾಮಾಯೀ ಕೀ ಜೈ'' ಎಂಬ ಧ್ವನಿಯೊಂದಿಗೆ ಆನಂದತುಂದಿಲರಾಗಿ ರೋಮಾಂಚನಗೊಂಡಿತು. ಪ್ರೇಮಾನುರಾಗ ರಂಜಿತವಾದ ಮುಖದಿಂದಿದ್ದ ಸ್ವಾಮಿ ಪ್ರೇಮಾನಂದರು ಆನಂದದಿಂದ ಕಂಪಿಸುತ್ತಿದ್ದರು. ಅವರ ಕಣ್ಣುಗಳಲ್ಲಿ , ಮುಖದಲ್ಲಿ ಆನಂದ ಚಿಮ್ಮುತ್ತಿತ್ತು. ಈ ಸ್ವರ್ಗೀಯ ದೃಶ್ಯವನ್ನು ನೇರವಾಗಿ ನನ್ನ ಕಣ್ಣುಗಳಿಂದ ನೋಡಿ ನಾನು ಧನ್ಯನಾದೆ. ಆ ಸರ್ವತ್ಯಾಗಿ ಸಂನ್ಯಾಸಿವೃಂದವು ಗುರುಪತ್ನಿಯಲ್ಲಿ ಹೊಂದಿದ್ದ ಶ್ರದ್ಧೆಯನ್ನು ಕಣ್ಣಾರೆಕಂಡು, ಗುರುಭಕ್ತಿ ಎಂಬುದನ್ನು ನಾನು ಒಂದಿಷ್ಟು ಗಳಿಸಿಕೊಂಡಿದ್ದೇನೆ.[೧] ಸ್ವಾಮಿ ಗಂಭೀರಾನಂದರು ತಾವು ಬರೆದ ಶ್ರೀಮಾತೆಯವರ ಜೀವನಚರಿತ್ರೆ ಗ್ರಂಥದಲ್ಲಿ ನಾನು ಹಿಂದೆ ಉಲ್ಲೇಖಿಸಿದ, 'ಉದ್ಬೋಧನ'ದಲ್ಲಿ ಪ್ರಕಟವಾದ ನನ್ನ ಸ್ಮೃತಿ ಲೇಖನದಿಂದ ಈ ಘಟನೆಯನ್ನು ಬಳಸಿಕೊಂಡಿದ್ದಾರೆ.

ಒಂದು ಸಲ ನಾನು ಶ್ರೀಮಾತೆಯವರಿಗೆ ಪ್ರಣಾಮ ಮಾಡಲು ಹೋಗಿದ್ದೆ. ನನ್ನೊಂದಿಗೆ ಒಬ್ಬ ಸ್ನೇಹಿತನಿಗೆ ಸಮಾನನಾದ ಆತ್ಮೀಯ ಯುವಕನೂ ಇದ್ದ. ಪ್ರಣಾಮ ಮಾಡಿದ ಅವನು ಜೋರಾಗಿ ಅಳತೊಡಗಿದ. ಸೇವಕ ಬ್ರಹ್ಮಚಾರಿಗಳು ಅವನಿಗೆ ಹೊರಗೆ ಹೋಗಲು ಹೇಳಿದರು. ಶ್ರೀಮಾತೆಯವರೂ ಅದನ್ನು ನೋಡಿ ಬಹಳ ಗಲಿಬಿಲಿಗೊಂಡರು. ವರಾಂಡದಲ್ಲಿ ನಿಂತಿದ್ದ ನನಗೂ ಸ್ವಲ್ಪ ಗೊಂದಲವುಂಟಾಯಿತು. ನಾನು ಬ್ರಹ್ಮಚಾರಿಗಳಿಗೆ ಹೇಳಿದೆ: ''ಹೀಗೇಕೆ ಮಾಡುತ್ತೀರಿ? ಶ್ರೀಮಾತೆ ಕೇವಲ ನಿಮ್ಮ ಸೊತ್ತಾಗಿರುವರೆ? ಅವರು ನಮಗೆ ಏನೂ ಅಲ್ಲವೆ?'' ಬ್ರಹ್ಮಚಾರಿ ಹೇಳಿದರು: ''ಮಹಾಶಯರೆ, ನೀವು ನೋಡುತ್ತಿಲ್ಲವೆ, ಯಾವ ರೀತಿ ಗದ್ದಲ ಆರಂಭಿಸಿಬಿಟ್ಟರು ನೋಡಿ.'' ಅತ್ತ ಶ್ರೀಮಾತೆಯವರು ಆ ಕ್ಷಣದಲ್ಲಿ ಹೇಳುತ್ತಿದ್ದರು: ''ಶಾಂತನಾಗು ಮಗೂ, ಶಾಂತನಾಗು. ನಿನಗೇನು ಬೇಕು?'' ಆ ಯುವಕ ಶ್ರೀಮಾತೆಯವರಿಗೆ, ''ಅಮ್ಮಾ, ಕೃಪೆ ಮಾಡಿ – ಕೃಪೆ ಮಾಡಿ'' ಎಂದಷ್ಟೇ ಹೇಳುತ್ತಿದ್ದ. ಅವನ ತಲೆಯ ಮೇಲೆ ಕೈಯಾಡಿಸುತ್ತಾ ಶ್ರೀಮಾತೆಯವರು, ''ಮಗೂ, ಕೃಪೆಯಂತೂ ಇದ್ದೇ ಇದೆ- ನೀನು ಶಾಂತನಾಗು'' ಎಂದರು. ಆ ಸ್ನೇಹಿತನು ನಿಧಾನವಾಗಿ ಶಾಂತನಾಗಿ, ಶ್ರೀಮಾತೆಯವರಿಗೆ ಪ್ರಣಾಮ ಮಾಡಿ ಹೊರಗೆ ಬಂದ. ನಾನು ಅವನನ್ನು ಕೆಳ ಅಂತಸ್ತಿಗೆ ಕರೆತಂದು, ಶರತ್ ಮಹಾರಾಜರ ಬಳಿಗೆ ಕರೆದುಕೊಂಡು ಹೋದೆ. ಮಹಾರಾಜರು ಕೇಳಿದರು, ''ಲಾವಣ್ಯ, ಮೇಲೆ ಏನಾಯಿತು?'' ನಾನು ನಡೆದದ್ದನ್ನು ಸಂಕ್ಷಿಪ್ತವಾಗಿ ಅವರಿಗೆ ವಿವರಿಸಿ ಹೇಳಿದೆ. ಅವರು ನಗುತ್ತಾ ಹೇಳಿದರು, ''ಪೂರ್ವ ಬಂಗಾಳದ (ಈಗಿನ ಬಾಂಗ್ಲಾದೇಶ) ಜನರು ತುಂಬಾ ಭಾವುಕರು. ತುಂಬಾ ಜನ ಈ ರೀತಿ ಗದ್ದಲ ಮಾಡುತ್ತಾರೆ. ಒಂದು ಸಲ ಜೆಸ್ಸೂರಿನ ಒಬ್ಬ ಭಕ್ತ ಏನು ಮಾಡಿದನೆಂದರೆ, ಬಟ್ಟೆಯೊಳಗೆ ಒಂದು ಚಾಕುವನ್ನು ಅಡಗಿಸಿಟ್ಟುಕೊಂಡು ಶ್ರೀಮಾತೆಯವರಿಗೆ ಪ್ರಣಾಮ ಮಾಡಲು ಬಂದಿದ್ದ. ಪ್ರಣಾಮ ಮಾಡಿ, ಎದ್ದು ನಿಂತುಕೊಂಡು, ಶ್ರೀಮಾತೆಯವರಿಗೆ ಚಾಕು ತೋರಿಸಿ ಹೇಳಿದ, 'ಅಮ್ಮಾ, ನಿಮ್ಮ ನಿಜ ಸ್ವರೂಪ ತೋರಿಸಿ' ಅಂತ. ಶ್ರೀಮಾತೆ ಸುಮ್ಮನಿದ್ದುದನ್ನು ಕಂಡು ಅವನು ಮತ್ತೆ ಹೇಳಿದ, 'ಹಾಗೆ ಮಾಡದಿದ್ದರೆ, ಇದೋ ನೋಡಿ, ನನ್ನ ಎದೆಗೆ ಚಾಕುವಿನಿಂದ ಇರಿದುಕೊಂಡುಬಿಡುತ್ತೇನೆ. ಶ್ರೀಮಾತೆಯವರು ಕಷ್ಟಕ್ಕೊಳಗಾದವರಂತೆ ಎದ್ದು ಹೋಗಿ, ಅವನ ಚಾಕುವನ್ನು ಹಿಡಿದುಕೊಂಡು ಹೇಳಿದರು, 'ಬಿಡು, ಏನು ಸ್ವರೂಪವನ್ನು ನೋಡುವಿಯಂತೆ? (ತಮ್ಮ ಮುಖದತ್ತ ಬೆರಳು ತೋರಿಸುತ್ತ) ಈ ಇದೇ ರೂಪ.' ಸ್ವರೂಪ-ದರ್ಶನವನ್ನು ನೋಡಬಯಸಿದವನು ಈ ಬಾರಿ ಅದೇನನ್ನೋ ನೋಡಿದವನಂತೆ ಶಾಂತನಾದ.

ಶ್ರೀಮಾತೆಯವರ ಸ್ಮೃತಿಕಥೆಯನ್ನು ಪ್ರಕಟಿಸುವ ವಿಷಯದಲ್ಲಿ ಸ್ವಾಮಿ ಶಾರದಾನಂದ ಮಹಾರಾಜ್ ಪತ್ರದ ಮೂಲಕ (೬.೮.೧೯೨೧ ರಂದು ಬರೆದುದು) ನನಗೆ ಒಂದು ನಿರ್ದೇಶನವನ್ನಿತ್ತಿದ್ದರು. ಅವರು ಹೀಗೆ ಬರೆದಿದ್ದರು: ''ನಿನಗೆ ಬರೆಯುವ ಸಾಮರ್ಥ್ಯವಿದೆ. ಆದರೆ ಯಾವ ವಿಷಯವನ್ನು ಕುರಿತು ಹೇಗೆ ಬರೆದರೆ ಜನರು ಸರಿಯಾದ ರೀತಿಯಲ್ಲಿ (ಶ್ರೀಮಾತೆಯವರ ವಿಶೇಷತೆ, ಅವರ ಬಗೆಗೆ ಹೇಳಬೇಕಾದ ವಿಷಯ, ಅವರ ಆಚರಣೆ ಹಾಗೂ ಅವರ ಮಾತುಗಳ ತಾತ್ಪರ್ಯ ಇವುಗಳನ್ನು) ತಿಳಿಯಬಲ್ಲರೋ, ಯಾವ ಘಟನೆಯನ್ನು ಎಷ್ಟರಮಟ್ಟಿಗೆ ಪ್ರಕಾಶಪಡಿಸುವುದು ಸೂಕ್ತ – ಈ ವಿಷಯಗಳನ್ನೆಲ್ಲ ಅರಿತುಕೊಳ್ಳಬೇಕು. ಅನೇಕ ಸಂದರ್ಭದಲ್ಲಿ ಲೇಖನಿಗೆ ಸಂಯಮವಿರಬೇಕಾ

---

೧ ಸ್ವಾಮಿ ಗಂಭೀರಾನಂದರು ಈ ಘಟನೆಯನ್ನು ೧೯೧೨ರ ದುರ್ಗಾಪೂಜೆಯ ಸಂದರ್ಭದಲ್ಲಿ ಎಂದು ಉಲ್ಲೇಖಿಸಿದ್ದಾರೆ. ಆದರೆ ಲೇಖಕರ ಸ್ಮೃತಿಕಥೆಯಿಂದ ತಿಳಿದು ಬರುವಂತೆ, ಈ ಘಟನೆಯು ೧೯೧೫ ಅಥವಾ ಅನಂತರದ ಯಾವುದೇ ವರ್ಷದ ದುರ್ಗಾಪೂಜೆ ಇರಬೇಕು. *(-ಸಂ)*

ಗುತ್ತದೆ.'' ಪೂಜ್ಯ ಮಹಾರಾಜರ ಈ ನಿರ್ದೇಶನವನ್ನು ಯಾವಾಗಲೂ ನಾನು ತರ್ಕಬದ್ಧತೆಯೊಂದಿಗೆ ನೆನಪಿಸಿಕೊಳ್ಳಲು ಪ್ರಯತ್ನಿಸಿದ್ದೇನೆ.

ಕೆಳಗೆ ಕೆಲವೊಂದು ಘಟನೆಗಳನ್ನು ಹಾಗೂ ಶ್ರೀಮಾತೆಯವರ ಕೆಲವು ಮಾತುಗಳನ್ನು ಉಲ್ಲೇಖಿಸುತ್ತಿದ್ದೇನೆ. ಇವುಗಳಲ್ಲಿ ಕೆಲವು ಘಟನೆಗಳನ್ನು ನಾನೇ ಕಣ್ಣಾರೆ ನೋಡಿದ್ದೇನೆ; ನನ್ನ ಕಿವಿಯಿಂದಲೇ ಕೇಳಿದ್ದೇನೆ. ಇನ್ನು ಕೆಲವನ್ನು ವಿಶ್ವಾಸಯೋಗ್ಯರಾದ ಪ್ರತ್ಯಕ್ಷದರ್ಶಿಗಳಿಂದ ಪಡೆದಿದ್ದೇನೆ.

೧

**ಶ್ರೀಮಾತೆ** – ''ಮಾರ್ಗವು ಕತ್ತಿಯ ಅಲಗಿನಂತೆ. ಆದರೂ ಭಗವಂತ ನಮ್ಮ ಕೈಹಿಡಿದುಕೊಂಡಿದ್ದಾನೆ, ನಮ್ಮನ್ನು ಮಡಿಲಲ್ಲಿರಿಸಿಕೊಂಡಿದ್ದಾನೆ. ಅವನೇ ನಮ್ಮನ್ನು ನೋಡಿಕೊಳ್ಳುತ್ತಾನೆ'' ಎಂದು ಶ್ರೀರಾಮಕೃಷ್ಣರು ಹೇಳುತ್ತಿದ್ದರು.

**ಸೇವಕ** – ಯಾಕೆ, ಏನನ್ನೂ ಅರಿತುಕೊಳ್ಳಲು ಬಿಡುತ್ತಿಲ್ಲವಲ್ಲ?

**ಶ್ರೀಮಾತೆ** – ಅದೇ ದುಃಖದ ಸಂಗತಿಯೆಂದು ನನಗನ್ನಿಸುತ್ತಿದೆ.

**ಒಬ್ಬ ಭಕ್ತ** – ಸತ್ತ ನಂತರ ಠಾಕೂರರು ಮಡಿಲಿಗೆಳೆದುಕೊಳ್ಳುತ್ತಾರೆ, ಇನ್ನು ಹೆಚ್ಚು ಮಾತೇಕೆ? ಈ ದೇಹದಲ್ಲೇ ಒಂದು ವೇಳೆ..

**ಶ್ರೀಮಾತೆ** – ಈ ದೇಹದಲ್ಲೇ ಅವರು ಮಡಿಲಲ್ಲಿ ಕುಳ್ಳಿರಿಸಿಕೊಂಡಿದ್ದಾರೆ, ತಲೆಯ ಮೇಲೆ ಅವರೇ ಇದ್ದಾರೆ; ನಿಜವಾಗಿಯೂ ಅವರು ಮಡಿಲಲ್ಲಿಟ್ಟುಕೊಂಡಿದ್ದಾರೆ.

**ಭಕ್ತ**– ನಿಜವಾಗಿಯೂ ನಮ್ಮನ್ನು ಮಡಿಲಲ್ಲಿಟ್ಟುಕೊಂಡಿದ್ದಾರೇನು?

**ಶ್ರೀಮಾತೆ** – ನಿಜವಾಗಿಯೂ ಇಟ್ಟುಕೊಂಡಿದ್ದಾರೆ.

**ಭಕ್ತ**– ಸತ್ಯ ಹೇಳುತ್ತಿದ್ದೀರಾ?

**ಶ್ರೀಮಾತೆ** – ಸತ್ಯವಾಗಿಯೂ ಹೇಳುತ್ತೇನೆ– ಮಡಿಲಲ್ಲಿಟ್ಟುಕೊಂಡಿದ್ದಾರೆ.

**ಭಕ್ತ**– ನಿಜವೆ?

**ಶ್ರೀಮಾತೆ** – (ದೃಢತೆಯಿಂದ) ಹೌದು, ನಿಜ.

೨

**ಒಬ್ಬ ಭಕ್ತ** – ಅಮ್ಮಾ, ಜನರು ನಿಮ್ಮನ್ನು ಭಗವತಿ ಎಂದು ಕರೆಯುತ್ತಾರೆ.

**ಶ್ರೀಮಾತೆ** – ಜನರೇನು ಹೇಳುವುದು, ನಾನೇ ಹೇಳುತ್ತೇನೆ.

೩

**ಒಬ್ಬರು ಕಾಯಿಲೆಯಿಂದಿದ್ದ ಸಾಧು** – ಅಮ್ಮಾ, ಠಾಕೂರರು ಕೇವಲ ಪರಲೋಕಕ್ಕಾಗಿ ಮಾತ್ರವೆ?

**ಶ್ರೀಮಾತೆ** – ಇಲ್ಲ , ಅವರು ಇಹಲೋಕಕ್ಕಾಗಿ, ಪರಲೋಕಕ್ಕಾಗಿ ಕೂಡ.

೪

**ಶ್ರೀಮಾತೆ** – ಠಾಕೂರರು ಹೇಳುತ್ತಿದ್ದರು: ನನ್ನನ್ನು (ಠಾಕೂರರನ್ನು) ಯಾರು ಪ್ರಾರ್ಥಿಸುವರೋ ಅವರಿಗೋಸ್ಕರ ನಾನು ಅಂತ್ಯಕಾಲದಲ್ಲಿ ಬಂದು ನಿಲ್ಲಬೇಕಾಗುವುದು ಅಂತ. ಇದು ಅವರ ಬಾಯಿಯಿಂದಲೇ ಬಂದ ಮಾತು.

(ವಿನೀತಭಾವದಿಂದ ಇದನ್ನು ಹೇಳುತ್ತಿದ್ದೇನೆ – ವಿಶ್ವಾಸಯೋಗ್ಯರಾದ ಅನೇಕರಿಂದ ನಾನು ಕೇಳಿದ್ದೇನೆ, ಠಾಕೂರ್ ಹಾಗೂ ಶ್ರೀಮಾತೆಯವರ ಕೃಪೆಗೆ ಪಾತ್ರರಾದ ಭಕ್ತರಿಗೆ ಅವರ ಅಂತ್ಯಕಾಲದಲ್ಲಿ ಶ್ರೀಠಾಕೂರರು ಹಾಗೂ ಶ್ರೀಮಾತೆಯವರು ದರ್ಶನ ನೀಡಿ, ಕೈಹಿಡಿದು ಕರೆದುಕೊಂಡು ಹೋಗುತ್ತಾರೆ, ಎಂಬುದಾಗಿ. ಶ್ರೀಮಾತೆಯವರಿಗೆ ಠಾಕೂರರು ಹೇಳಿದ್ದರು, 'ನಿನ್ನ ಕೃಪೆಗೆ ಪಾತ್ರರಾದ ಭಕ್ತರ ಅಂತ್ಯಕಾಲದಲ್ಲಿ ನಾನೇ ಬಂದು ಅವರನ್ನು ಕರೆದುಕೊಂಡು ಹೋಗುತ್ತೇನೆ' ಎಂಬುದಾಗಿ.)

೫

ಸ್ವಾಮಿ ಬ್ರಹ್ಮಾನಂದರು ಬೇಲೂರು ಮಠದಿಂದ ಶ್ರೀಮಾತೆಯವರ ದರ್ಶನ ಪಡೆಯಲು ಬಾಗ್‌ಬಜಾರಿಗೆ ಆಗಾಗ ಹೋಗುತ್ತಿದ್ದರು. ಸ್ವಾಮಿ ಶಾರದಾನಂದರು, ಮಹಾರಾಜರನ್ನು ಕರೆದುಕೊಂಡು, ಕೆಳ ಅಂತಸ್ತಿನ ಅಂಗಣದಲ್ಲಿ ನಿಂತಿರುತ್ತಿದ್ದರು. ಶ್ರೀಮಾತೆಯವರು ವರಾಂಡಕ್ಕೆ ಬಂದು, ಪ್ರಣಾಮ ಸ್ವೀಕರಿಸಿ ಆಶೀರ್ವಾದ ಮಾಡುತ್ತಿದ್ದರು.

೬

ಒಬ್ಬ ಭಕ್ತ ಶ್ರೀಮಾತೆಯವರಿಂದ ದೀಕ್ಷೆ ಪಡೆದ ನಂತರ ಅವರನ್ನು ಕೇಳಿದ: ಅಮ್ಮಾ, ನನಗೆ ಬಾಲ್ಯದಿಂದಲೇ ಯೋಗಶಾಸ್ತ್ರಕ್ಕೆ ಅನುಸಾರವಾಗಿ ಯೋಗಾಭ್ಯಾಸ ಮಾಡಲು ತೀವ್ರವಾದ ಇಚ್ಛೆ ಉಂಟಾಗಿತ್ತು. ನಾನು ಯೋಗಾಭ್ಯಾಸ ಆರಂಭಿಸಲೆ?

ಶ್ರೀಮಾತೆ ಸ್ವಲ್ಪ ಹೊತ್ತು ಸುಮ್ಮನಿದ್ದು, ಬಳಿಕ ನಗುತ್ತ ಹೇಳಿದರು, ''ಏನನ್ನು ಪಡೆಯಲು ಸಾಧಕರು ಯೋಗಾಭ್ಯಾಸ ಮಾಡುವರೋ ಅದನ್ನು ನೀನು ಈಗಾಗಲೇ ಪಡೆದಿದ್ದೀಯೆ, ಮಗೂ. ಇನ್ನು ಅದರಿಂದ ಏನು ಪ್ರಯೋಜನ? ಅದರಲ್ಲಿ ಏನಾದರೂ ಲೋಪವುಂಟಾದರೆ, ಅದರಿಂದ ಹಾನಿ ಕೂಡ ಆಗುವುದು. ನಿನಗದು ಅಗತ್ಯವಿಲ್ಲ.''

**ಭಕ್ತ** – ಅಮ್ಮಾ, ನನಗೆ ಅರ್ಥವಾಗುತ್ತಿಲ್ಲ.

**ಶ್ರೀಮಾತೆ** – ಆದೀತು, ಕ್ರಮೇಣ ಅರ್ಥವಾದೀತು.

೭

ಶ್ರೀಮಾತೆಯವರ ಪಕ್ಕದಲ್ಲಿ ದೀಕ್ಷೆಯ ಆಸನದಲ್ಲಿ ಕುಳಿತಿದ್ದ ವಿದ್ಯಾವಂತ ಭಕ್ತನೊಬ್ಬ ಶ್ರೀಮಾತೆಯವರಿಗೆ ಹೇಳಿದ: ಅಮ್ಮಾ, ವಿಶ್ವಾಸ ಬರುತ್ತಿಲ್ಲ!

ಶ್ರೀಮಾತೆ ನಗುತ್ತ ಹೇಳಿದರು: ಅದು ಇಲ್ಲದಿದ್ದರೆ ಏನು, ನಾನಂತೂ ಕೊಡುತ್ತೇನೆ. ನೀನು ತೆಗೆದುಕೋ.

ಹೀಗೆ ಕೊಡುವುದು, ಪಡೆಯುವುದು ನಡೆದುಹೋಯಿತು. ಬಳಿಕ ಆ ಭಕ್ತ ರಾಮಕೃಷ್ಣ ಮಠ – ಮಿಷನ್ನಿನ ಅನೇಕ ಕೆಲಸ ಕಾರ್ಯಗಳನ್ನು ನೆರವೇರಿಸಿದ; ಅತ್ಯಂತ ಜವಾಬ್ದಾರಿಯ ಕೆಲಸಗಳನ್ನು ಮಾಡುವಾಗಲೂ ದಿನದ ಬಹುಪಾಲು ಸಮಯವನ್ನು ಜಪ- ಧ್ಯಾನಗಳಲ್ಲಿ ವಿನಿಯೋಗಿಸತೊಡಗಿದ.

೮

ಒಂದು ಸಲ ದುರ್ಗಾಪೂಜೆಯ ಸಂದರ್ಭದಲ್ಲಿ ಬೇಲೂರು ಮಠದಲ್ಲಿ ಶ್ರೀಮಾತೆಯವರು ಬೆಳಗಿನ ಹೊತ್ತು ಕೆಲವು ಮಂದಿ ಭಕ್ತೆಯರೊಂದಿಗೆ ಅಡುಗೆ ಮನೆಯ ಸಮೀಪದಲ್ಲೇ ಹೋಗುತ್ತಿದ್ದರು. ಅಲ್ಲೆಲ್ಲ ನೋಡುತ್ತ ಅವರೆಂದರು: ''ಮಕ್ಕಳೆಲ್ಲ ಚೆನ್ನಾಗಿ ತರಕಾರಿ ಕತ್ತರಿಸುತ್ತಾರೆ.''

ಸ್ವಾಮಿ ಜಗದಾನಂದ ಮಹಾರಾಜ್ ಕೈಜೋಡಿಸುತ್ತ ಹೇಳಿದರು: ''ತರಕಾರಿ ಹೆಚ್ಚುವುದಾಗಿರಲಿ, ಧಾನ್ಯ ಅರೆಯುವುದಾಗಿರಲಿ, ಅಥವಾ ಜಪ-ಧ್ಯಾನ ಮಾಡುವುದಾಗಿರಲಿ- ಬ್ರಹ್ಮಮಯಿಯನ್ನು ಪ್ರಸನ್ನಗೊಳಿಸುವುದೇ ನಮ್ಮ ಉದ್ದೇಶ.''

ಶ್ರೀಮಾತೆಯವರು ನಗುತ್ತ ಹೇಳಿದರು, ''ಅದೇನೋ ನಿಜ, ಮಗೂ.''

ಅಲ್ಲಿದ್ದವರೆಲ್ಲರೂ ಶ್ರೀಮಾತೆಯವರಿಗೆ ಪ್ರಣಾಮ ಮಾಡಿದರು.

೯

**ಒಬ್ಬ ಭಕ್ತ** – ಶ್ರೀರಾಮಕೃಷ್ಣರನ್ನು ಅನೇಕ ಮಂದಿ ಭಗವಾನ್ ಎಂದು ಕರೆಯುತ್ತಾರೆ. ಹಾಗಿದ್ದರೆ, ನೀವು ಯಾರು?

**ಶ್ರೀಮಾತೆ**– ಅವರು ಭಗವಾನ್ ಎಂದಾದರೆ, ನಾನು ಭಗವತಿ.

ಒಂದು ಸಲ ಒಬ್ಬ ಭಕ್ತ ಶರತ್ ಮಹಾರಾಜರನ್ನು ಕೇಳಿದ: ಠಾಕೂರರು ಸ್ವಯಂ ಭಗವಂತ. ಹಾಗಿದ್ದರೆ, ಶ್ರೀಮಾತೆ ಏನಾಗಿದ್ದಾರೆ?

ಶರತ್ ಮಹಾರಾಜ್ ಹೇಳಿದರು: ಭಗವಂತನೇನು, ಬೆರಣಿ – ಸಗಣಿ ಸಂಗ್ರಹಿಸುವ ಹೆಣ್ಣುಮಗಳನ್ನು ಮದುವೆಯಾಗಿದ್ದಾನೆಯೆ? ನೀನೊಳ್ಳೆಯ ಗಿರಾಕಿ! (ಶ್ರೀರಾಮಕೃಷ್ಣರೇ ಹೇಳಿದ್ದರು– ನಾನೇನು ಸೋರೆಕಾಯಿ, ಬಸಳೆ ಸೊಪ್ಪು ತಿನ್ನುವವಳನ್ನು ಮದುವೆಯಾಗಿದ್ದೇನೇನು?)

ಒಬ್ಬರು ಸಾಧುಗಳು ಆಶ್ರಮದ ಅಧ್ಯಕ್ಷರೊಂದಿಗೆ ಯಾವ ಕಾರಣವೂ ಇಲ್ಲದೆ ವೈಮನಸ್ಯವುಂಟಾಗಿ, ಆಶ್ರಮ ಬಿಟ್ಟು ಎಲ್ಲಿಗೋ ಹೊರಟರು. ನಿರ್ದಿಷ್ಟವಾಗಿ ಎಲ್ಲಿಗೂ ಹೋಗದೆ, ದಾರಿಯಲ್ಲೇ ನಡೆಯುತ್ತ ಶ್ರೀಮಾತೆಯವರ ದರ್ಶನ ಪಡೆಯಲು ಹೋದರು. ಆ ಸಾಧು ಏನೇನೋ ಮಾತನಾಡುತ್ತಿದ್ದು, ಕಾತರದ ಧ್ವನಿಯಿಂದ ಕೇಳಿದರು, ''ಅಮ್ಮಾ, ಸಂಸಾರ ತಂದೆ – ತಾಯಿ ಆತ್ಮೀಯ ಬಂಧುಗಳು ಎಲ್ಲರನ್ನೂ ಬಿಟ್ಟು ಆಶ್ರಮಜೀವನವನ್ನು ಸ್ವೀಕರಿಸಿದೆ. ಆದರೆ ಈ ಇಲ್ಲೂ ಅದೇ ಸಂಸಾರದ ವಾದವಿವಾದ, ಜಗಳ–ಜಂಜಾಟ!''

**ಶ್ರೀಮಾತೆ** – ''ಮಗೂ, ಆಶ್ರಮವೂ ಎರಡನೇ ಸಂಸಾರ. ಆದರೆ ಇಲ್ಲಿ ಜಗಳ-ಜಂಜಾಟಗಳ ನಡುವೆ ಭಗವಂತನ ಸಾನ್ನಿಧ್ಯ ಹೆಚ್ಚು ಲಭಿಸುತ್ತದೆ.''

೧೦

''ಪರಗೃಹವಾಸಿ ಹಾಗೂ ಪರಾನ್ನಭೋಗಿ- ಇವೆರಡೂ ಆಗಬಾರದು ಮಗೂ, ಅದು ಅತ್ಯಂತ ಕಷ್ಟಕರ'' ಎಂದು ಒಬ್ಬ ಭಕ್ತನಿಗೆ ಶ್ರೀಮಾತೆಯವರು ಹೇಳಿದರು.

*(ಸಮಾಪ್ತಿ)*

## ಶ್ರೀಮಾತೆಯವರ ಉಪದೇಶಗಳು



❋ ಈಗೇನು ಹೊಂದಿದ್ದೀಯೋ ಅದರಲ್ಲೇ ಆಳವಾಗಿ ಮುಳುಗು. ಜಪ, ಧ್ಯಾನ ಮಾಡು, ಸತ್ಸಂಗದಲ್ಲಿರು. ಅಹಂಕಾರ ತಲೆಯೆತ್ತಲು ಸ್ವಲ್ಪವೂ ಅವಕಾಶ ಕೊಡಬೇಡ. ರಾಖಾಲ್‌ಗೆ ಎಂಥ ಬಾಲಕನ ಸ್ವಭಾವ ನೋಡು! ಈಗಲೂ ಅವನು ಸಣ್ಣ ಹುಡುಗನಂತೆಯೇ ಇದ್ದಾನೆ. ಶರತ್ ಹೇಗಿದ್ದಾನೆ ನೋಡು, ಎಷ್ಟೊಂದು ಕೆಲಸಗಳನ್ನು ಮಾಡುತ್ತಾನೆ, ಎಷ್ಟೊಂದು ತೊಂದರೆಗಳನ್ನು ಮೈಮೇಲೆ ಹೊತ್ತುಕೊಳ್ಳುತ್ತಾನೆ, ಅದನ್ನು ಸ್ವಲ್ಪವೂ ತೋರಿಸಿಕೊಳ್ಳುವುದಿಲ್ಲ ! ಅವನು ಸಾಧು, ಆದರೂ ಅಷ್ಟೆಲ್ಲ ಏಕೆ ಮಾಡುತ್ತಾನೆ? ಮನಸ್ಸು ಮಾಡಿದರೆ ಅವರೆಲ್ಲ ಹಗಲು ರಾತ್ರಿ ಭಗವಂತನಲ್ಲೇ ಮನಸ್ಸನ್ನಿಟ್ಟು ಧ್ಯಾನಕ್ಕೆ ಕುಳಿತುಕೊಳ್ಳಬಲ್ಲರು. ಕೇವಲ ನಿಮ್ಮ ಮಂಗಳಕ್ಕಾಗಿ ಮಾತ್ರ ಇವರೆಲ್ಲ ಮನಸ್ಸನ್ನು ಕೆಳಗಿಳಿಸಿ ಹಿಡಿದಿಟ್ಟುಕೊಂಡಿದ್ದಾರೆ. ಅವರ ಜೀವನವನ್ನು ಕಣ್ಣ ಮುಂದೆ ಇಟ್ಟುಕೊಂಡಿರು; ಅವರ ಸೇವೆ ಮಾಡು. ನೀನು ಯಾರ ಮಗು, ಯಾರ ಆಶ್ರಯದಲ್ಲಿದ್ದೀಯಾ ಎಂಬುದನ್ನು ಯಾವಾಗಲೂ ಮನಸ್ಸಿನಲ್ಲಿಟ್ಟುಕೋ. ಎಂದಾದರೂ ಮನಸ್ಸಿನಲ್ಲಿ ಕೆಟ್ಟ ಆಲೋಚನೆ ಬಂದರೆ ಮನಸ್ಸಿಗೆ ಹೇಳು – ನಾನು ಇಂಥವರ ಶಿಷ್ಯನಾಗಿ ಇಂಥ ಕೆಲಸ ಮಾಡಬಹುದೆ? ಅಂತ. ನೀನೇ ನೋಡುತ್ತೀಯೆ, ಇದರಿಂದ ಮನಸ್ಸಿಗೆ ಬಲ ಬರುವುದು, ಶಾಂತಿ ದೊರಕುವುದು.

*(‘ಶ್ರೀಶಾರದಾದೇವಿ ವಚನವೇದ’, ಪು.೩೫೦)*